**ಕರ್ನಾಟಕ ಸರ್ಕಾರ**

# ಕಾಲೇಜು ಶಿಕ್ಷಣ ಇಲಾಖೆ

ಸಂ: ಡಿಸಿಇ/ಟಿಆರ್‌ಎನ್/ಟಿಆರ್‌ಎನ್/24/2023-ಟಿಡಿಜಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು. ದಿನಾಂಕ: 17.07.2023.

## ಸುತ್ತೋಲೆ

ವಿಷಯ: 2023 ನೇ ಸಾಲಿಗೆ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಬೋಧಕರ ವರ್ಗಾವಣೆ ಕೌನ್ಸಿಲಿಂಗ್ ಸಂಬಂಧ ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ: ಈ ಕಚೇರಿ ಸಮಸಂಖ್ಯೆಯ ಅಧಿಸೂಚನೆ ದಿನಾಂಕ: 05.07.2023.

** ** **

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಬೋಧಕರ (ಪ್ರಾಧ್ಯಾಪಕರು, ಸಹ/ ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು ಮತ್ತು ಕ್ರೀಡಾ & ದೈಹಿಕ ಶಿಕ್ಷಣ ನಿರ್ದೇಶಕರು) ವರ್ಗಾವಣೆಗಳನ್ನು ನಿಯಂತ್ರಿಸುವ ಸಲುವಾಗಿ ರೂಪಿಸಲಾದ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ) ನಿಯಮಗಳು-2021 ನಿಯಮಗಳನ್ವಯ ಮಂಜೂರಾದ ಬೋಧಕರ ಹುದ್ದೆಗಳ ಶೇಕಡಾ 9 ರಷ್ಟು ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗಳು ಹಾಗೂ ಶೇಕಡಾ 6 ರಷ್ಟು ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆ ವರ್ಗಾವಣೆ ಪ್ರಕ್ರಿಯೆ ಕೈಗೊಳ್ಳಲು ಉದ್ದೇಶಿಸಿ ವೇಳಾಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಸದರಿ ವೇಳಾಪಟ್ಟಿಯನ್ವಯ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಬಯಸುವ ಮತ್ತು ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆ ಬಯಸುವ ಬೋಧಕರು ಅಗತ್ಯ ದಾಖಲೆಗಳೊಂದಿಗೆ ಇಲಾಖೆಯ ವೆಬ್ ಸೈಟ್‌ನಲ್ಲಿ ಲಭ್ಯಗೊಳಿಸುವ ಆನ್ಲೈನ್ ನಮೂನೆಯಲ್ಲಿ ದಿನಾಂಕ:12.07.2023ರ ಒಳಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ನಿಗದಿಪಡಿಸಲಾಗಿತ್ತು.

ಆದರೆ ನಿಗದಿತ ಕೊನೆಯ ದಿನಾಂಕದ ಒಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದ ಹಲವು ಬೋಧಕರು ಕೊನೆಯ ದಿನಾಂಕವನ್ನು ವಿಸ್ತರಿಸಲು ಕೋರಿರುವುದನ್ನು ಪರಿಗಣಿಸಿ ವರ್ಗಾವಣೆ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಕೆಳಕಂಡಂತೆ ಪರಿಷ್ಕರಿಸಲಾಗಿದೆ.

## ವರ್ಗಾವಣೆ ಕೌನ್ಸಿಲಿಂಗ್‌ನ ತಾತ್ಕಾಲಿಕ ವೇಳಾಪಟ್ಟಿ:

| ಕ್ರ. ಸಂ. | ವಿವರ | ದಿನಾಂಕ: |
|---|---|---|
| 01 | ವರ್ಗಾವಣೆ ನಿಯಮಗಳ ನಿಯಮ 4 ರ ಉಪ ನಿಯಮ (2) ಮತ್ತು (4) (ಎ) ರಲ್ಲಿನ ಅವಕಾಶಗಳಂತೆ ವಿಶೇಷ ಪ್ರಕರಣಗಳ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 19-07-2023 |
| | ವರ್ಗಾವಣೆ ನಿಯಮಗಳ ನಿಯಮ 4ರ ಉಪ ನಿಯಮ (4) ರಲ್ಲಿನ ಅವಕಾಶಗಳಂತೆ ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಯಿಂದ ವಿನಾಯಿತಿಗಾಗಿ ಮನವಿ ಸಲ್ಲಿಸಲು ಕೊನೆಯ ದಿನಾಂಕ | |

| ಕ್ರ. ಸಂ. | ವಿವರ | ದಿನಾಂಕ: |
|---|---|---|
| 02 | ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆ ಮತ್ತು ವಿಶೇಷ ಪ್ರಕರಣಗಳ ತಾತ್ಕಾಲಿಕ ವರ್ಗಾವಣಾ ಆದ್ಯತಾ ಪಟ್ಟಿ ಪ್ರಕಟಣಾ ದಿನಾಂಕ | 21-07-2023 |
| 03 | ತಾತ್ಕಾಲಿಕ ವರ್ಗಾವಣಾ ಆದ್ಯತಾ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ | 23-07-2023 |
| 04 | ವಿಶೇಷ ಪ್ರಕರಣಗಳ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಅಂತಿಮ ವರ್ಗಾವಣೆ ಆದ್ಯತಾ ಪಟ್ಟಿ ಮತ್ತು ಕೌನ್ಸಿಲಿಂಗ್ ಮೂಲಕ ಭರ್ತಿ ಮಾಡುವ ಖಾಲಿಹುದ್ದೆಗಳ ಪ್ರಕಟಣೆ | 24-07-2023 |
| 05 | ವಿಶೇಷ ಪ್ರಕರಣಗಳ 1st Round ಕೌನ್ಸಿಲಿಂಗ್ (ವಿವರವಾದ ವೇಳಾಪಟ್ಟಿಯನ್ನು ಅಂತಿಮ ವೇಳಾಪಟ್ಟಿ ಪ್ರಕಟಣೆ ನಂತರ ಪ್ರಕಟಿಸಲಾಗುವುದು) | 25-07-2023 |
| 06 | ವಿಶೇಷ ಪ್ರಕರಣಗಳ 2nd Round ಕೌನ್ಸಿಲಿಂಗ್ (ವಿವರವಾದ ವೇಳಾಪಟ್ಟಿಯನ್ನು ಅಂತಿಮ ವೇಳಾಪಟ್ಟಿ ಪ್ರಕಟಣೆ ನಂತರ ಪ್ರಕಟಿಸಲಾಗುವುದು) | 26-07-2023 |
| 07 | ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆ ಕೌನ್ಸಿಲಿಂಗ್ (ವಿವರವಾದ ವೇಳಾಪಟ್ಟಿಯನ್ನು ಅಂತಿಮ ವೇಳಾಪಟ್ಟಿ ನಂತರ ಪ್ರಕಟಿಸಲಾಗುವುದು) | 27-07-2023 ರಿಂದ 28-07-2023 |

**ಉಳಿದಂತೆ ದಿನಾಂಕ:05.07.2023ರ ಅಧಿಸೂಚನೆಯ ಸೂಚನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ವರ್ಗಾವಣೆಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಕಾಲಕಾಲಕ್ಕೆ ಇಲಾಖಾ ವೆಬ್‌ಸೈಟ್‌ನ ಬೋಧಕರ ವರ್ಗಾವಣೆ – 2023 Web page ನಲ್ಲಿ ಪ್ರಕಟಿಸಲಾಗುವುದು. ಸಂಬಂಧಿಸಿದವರು ಇಲಾಖಾ ವೆಬ್ ಸೈಟ್ ಅನ್ನು ಗಮನಿಸುವುದು.**

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ**

**ಪ್ರತಿಯನ್ನು:**

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಬೋಧಕರುಗಳಿಗೆ -ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಹಾಗೂ ಕಲಬುರಗಿ-ಮಾಹಿತಿಗಾಗಿ.
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ರಕ್ಷಾ ಕಡತ.
5. ಕಛೇರಿ ಪ್ರತಿ.